ಬೇಕು ಎಂಬ ದೃಷ್ಟಿಯಿಂದ ಎತ್ತಂಕ್ಯೆರಿ ಮಾಡಿಸಿದ್ದೀರಿ. ಆದರೆ ಅಲ್ಲಿರುವ ಡಾಕ್ಟರಿಂದ ಏನೂ ಪ್ರಯೋಜನವಾಗುತ್ತಿಲ್ಲ; ವಾರದಲ್ಲಿ ಎರಡು ದಿವಸ ಮುಖ್ಯ ಡಾಕ್ಟರು ಅಲ್ಲಿರುತ್ತಾರೆ, ಆಮೇಲೆ ಇರುವುದಿಲ್ಲ ಅವರು ರಾಜಕೀಯದಲ್ಲಿವಿದ್ದರೆ ಚೆನ್ನಾಗಿರುತ್ತಿತ್ತು. ಅವರು ಡಾಕ್ಟರಾಗಿರುವುದಕ್ಕೆ ಲಾಯಕ್ಕಿಲ್ಲ. ಕಮಿಷನ್ ತೆಗೆದುಕೊಂಡು ಕೆಲಸ ಕೊಡಿಸುವುದು, ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿಸುವುದು ಅವರ ಕೆಲಸವಾಗಿದೆ. ಆದ್ದರಿಂದ ಬೇರೆ ಯಾರನ್ನಾದರೂ ಕಳಿಸಿ ವಿಚಾರಣೆ ಮಾಡಿಸಿ ಆ ಡಾಕ್ಟರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

SRI H.M. CHANNABASAPPA.—Madam, the Regional Deputy Director of Health and Family Planning Services, Mysore is a senior officer. I have not got it enquired by D.H.O. The hon. Member's point is that he goes to Mysore. In fact I have called for explanation whether every time he goes to Mysore he has obtained permission of his immediate superior officer to leave his headquarters, Anyway. I will look into the matter and see such things are not repeated.

(v) re. Seizure of certain pledged articles from the hours of an unlicensed money-lender (Humnabad Taluk).

SRI V. N. PATIL (Humnabad).—Madam, I call the attention of the Chief Minister to the raid and seizure of certain pledged articles from the house of an unlicensed money-lender in Humnabad taluk by the Sub-Inspector of Police, Manna akheli.

SRI M. Y. GHORPADE (Minister for Finance).—Madam on behalf of the Chief Minister I wish to make the following statement.

On 8th June 1977 at 2-00 p m the Sub-Inspector of Police Mannakhelli received a joint complaint by Shri Chandarappa, son of Basappa and Smt Nagamma, wife of Sangappa, resident of Bhimalkheda to the effect that they have taken a loan of Rs. 800 at the rate of Rs. 2% per month and Rs. 400 at the rate of Rs. 3% per month respectively from Shri Revappa, Son of Sharnappa Mudda resident of Bhimalkheda. Shri Revappa has got agreement bond from them. The complainants alleged that the accused Revappa is having no Money Lending Licenses to deal such business. The Police Sub Inspector Mannaekbelli registered a case in Crime No, 51/77 under section 5 of Karnataka Money Lending Act on 8th June 1977. The Police Sub-Inspector visited Bhimalkheda village, raided the house and searched the house of Shri Revappa in the presence of two panchas, namely Thippanna, son of Chandrappa Phulera and Devendrappa son of Gundappa Barnalli; The panchanama was made from 4-00 p m to 9-30 p m on 8th June 1977. 49 articles (vessels), 13 silver ornaments and 30 gold ornaments were seized. 81 Agreement bonds and several registers were also seized After seizing the articles, orders have been obtained from the Judicial Magistrate first class Court, Bidar to retain the property in the Police custody for the purpose of investigation. The seized articles are in safe

custody at Mannakhelli Police Station. The Police Sub-Inspector has been directed to finalise the case early. Action is also being taken by the Tahsildar and Taluk Magistrate Humnabad to release the pledged articles to the eligible persons after scrutiny and enquiry under Karnataka Debt Relief Act.

There is no complaint to the Sub-Inspector of Police, Mannakhelli to the effect that the Money Lender is not returning the articles pleading that they are with the Police.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಕೆಲವು ಸತ್ಯಾಂಶಗಳಿವೆ. ಆದರೆ ಕೆಲವಷ್ಟಿಗೆ ಉತ್ತರ ಸರಿ ಹೊಂದುವುದಿಲ್ಲ. ಮನಿ ಲೆಂಡರ್ ಸಾಮಾನುಗಳನ್ನು ಮತ್ತೆ ಯಾರಿಗೂ ಕೊಟ್ಟಿಲ್ಲ. ಕೇಳಿದವರಿಗೆಲ್ಲಾ ಪಬ್ಲಿಕ್ ಆಕ್ಷನ್‌ನಲ್ಲಿ ಸೇಲ್ ಮಾಡಿದ್ದೇನೆ ಎಂದು ಹೇಳುತ್ತಾನೆ. ಇದಕ್ಕಾಗಿ ಕಮ್ಯುನಿಸ್ಟ್ ಪಾರ್ಟಿಯಿಂದ ಉಸ್ತುವಾರಿ ಮಾಡಿದ ಮೇಲೆ ಸಬ್‌ಇನ್ಸ್‌ಪೆಕ್ಟರ್ ಸೀನ್ ಮಾಡಿದರು, ಸಾಮಾನುಗಳನ್ನು ಕೇಳಿದರೆ ಪೋಲೀಸಿನವರನ್ನು ಕೇಳಿ, ಕಮ್ಯುನಿಸ್ಟ್ ಪಾರ್ಟಿಯವರನ್ನು ಕೇಳಿ ಎಂದು ಉತ್ತರ ಕೊಡುತ್ತಿದ್ದಾರೆ. ಡಾಕ್ಯುಮೆಂಟ್ಸ್ ಅವರ ಹತ್ತಿರ ಇದೆ. ಸ್ಪೆಷಲ್ ಮೆಂಟಿನಲ್ಲಿ 13 ಸಿಲ್ವರ್ ಆರ್ನಮೆಂಟ್ಸ್, 30 ಗೋಲ್ಡ್ ಆರ್ನಮೆಂಟ್ಸ್ ಸೀಜ್ ಮಾಡಿದ್ದಾರೆ ಎಂದು ಹೇಳಿದ್ದೀರಿ ಅದಲ್ಲದೇ ಇನ್ನೂ ಎಷ್ಟೋ ಸಾಮಾನುಗಳು ಹೋಗಿವೆ ನಾನು ನಿಮಗೆ ನೇರವಾಗಿ ಕೇಳುವುದೇನೆಂದರೆ, ಡೆಟ್ ರಿಲೀಫ್ ಆಕ್ಟ್ ಈಗ ಇಲ್ಲವೇ, ಇವ್ವರೆ ಸಾಮಾನುಗಳನ್ನು ಯಾತಕ್ಕೆ ವಾಪಸ್ ಕೊಡುತ್ತಿಲ್ಲ ಎಂದು ಈಗ ಸಾಮಾನುಗಳನ್ನು ಒಂದು ಅಥವಾ ಎರಡು ತಿಂಗಳಲ್ಲಿ. ಜನಗಳಿಗೆ ವಾಪಸ್ ಕೊಡಿಸುತ್ತೀರಾ? ಅಥವಾ ವಾಪಸ್ ಕೊಡಿಸುವುದಕ್ಕೆ ಎಷ್ಟು ಅವಧಿ ಬೇಕು

ಆತ ನಾನ್ ಲೈಸೆನ್ಸ್‌ಡ್ ಮನಿ ಲೆಂಡರ್ ಎಂದು ಅರ್ಜಿ ಕೂಡ ಕೊಟ್ಟಿದ್ದಾನೆ. ಆದರೆ ಮಾನ್ಯ ಮಂತ್ರಿಗಳ ಉತ್ತರದಲ್ಲಿ ಅದಿಲ್ಲ.

ಶ್ರೀ ಎಂ. ಮೈ. ಘೋರ್ಪಡೆ,—ಉತ್ತರ ಬಹಳ ಸ್ಪಷ್ಟವಾಗಿದೆ. ಲೈಸೆನ್ಸ್ ಇಲ್ಲದಿರುವುದರ ಬಗ್ಗೆ ನಾವು ಕಾನೂನು ಪ್ರಕಾರ ನೋಡುತ್ತಿದ್ದೇವೆ ಋಣ ಪರಿಹಾರ ಕಾನೂನು ಪ್ರಕಾರ ಪೋಲೀಸರು ಸಾಮಾನುಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಆ ಸಾಮಾನುಗಳನ್ನು ಇನ್ನೂ ಅವರೇ ಇಟ್ಟುಕೊಂಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಋಣ ಪರಿಹಾರ ಕಾನೂನು ಪ್ರಕಾರ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡ ವಸ್ತುಗಳನ್ನು ಪೋಲೀಸರು ವಾಪಸ್ಸು ಕೊಡುತ್ತಿಲ್ಲ. ಅಥವಾ ಅವರು ಸಾಕಷ್ಟು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಮಾನ್ಯ ಸದಸ್ಯರ ಅಭಿಪ್ರಾಯವಾದರೆ ಈ ವಿಚಾರವನ್ನು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರು ಅಲ್ಲಿಗೆ ನೇರವಾಗಿ ಹೋಗಿ ಕಾನೂನು ಪ್ರಕಾರ ನ್ಯಾಯವಾಗಿ ಸಾಕಷ್ಟು ದಕ್ಷತೆಯಿಂದ ಕಾರ್ಯನಿರ್ವಹಿಸುವಂತೆ ತಿಳಿಸುತ್ತೇನೆ. ಆ ಮಟ್ಟದಲ್ಲಿರುವ ಪೋಲೀಸ್ ಅಧಿಕಾರಿಗಳು ಸಾಕಷ್ಟು ದಕ್ಷತೆಯಿಂದ ಕೆಲಸ ಮಾಡಲಾರದೇ ಎಂದು ಅರ್ಥ ಬರುವ ರೀತಿಯಲ್ಲಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಸದಸ್ಯರು ಏನು ಅನುಮಾನ ವ್ಯಕ್ತಪಡಿಸಿದ್ದಾರೆ ಅದರ ಬಗ್ಗೆ ಸ್ವಂತಃ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರೇ ಹೋಗಿ ತನಿಖೆ ಮಾಡಿ, ಕಾನೂನು ಪ್ರಕಾರ ಸರಿಯಾದ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ತಿಳಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಕಳೆದ ನಾಲ್ಕು ತಿಂಗಳಿಂದ ಬೀದರ್ ಜಿಲ್ಲೆಯಲ್ಲಿ ಒಂದೂ ಕೂಡ ಕರ್ನಾಟಕ ಋಣಪರಿಹಾರ ಕಾಯಿದೆ ಪ್ರಕಾರ ಡಿಸ್ಪೋಸ್ ಆಗುತ್ತಿಲ್ಲ.

ಶ್ರೀ ಎಂ. ಮೈ. ಘೋರ್ಪಡೆ — ಋಣ ಪರಿಹಾರ ಕಾಯಿದೆಯನ್ನು ಜಾರಿಗೊಳಿಸುವ ಕೆಲಸ ಬರೀ ಪೋಲೀಸ್ ಅಧಿಕಾರಿಗಳದೇ ಅಲ್ಲ. ಋಣ ಪರಿಹಾರ ಕಾಯಿದೆಯ ಉದ್ದೇಶವನ್ನು ಹಳ್ಳಿ ಹಳ್ಳಿಗೂ ಹೋಗಿ ಸಭೆಗಳನ್ನು ಕರೆದು ಸರಿಯಾದ ಭಾಷೆಯಲ್ಲಿ ತಿಳಿಸಬೇಕು. ಕೆಲವು ಜನ ಶ್ರೀಮಂತರು ತಾವು ಇಟ್ಟುಕೊಂಡಿದ್ದ ಕೆಲವು ವಸ್ತುಗಳನ್ನು ಸ್ವಯಂಪ್ರೇರಣೆಯಿಂದ ವಾಪಸ್ಸು ಕೊಟ್ಟಿರುವ ಪ್ರಸಂಗಗಳು ಬೇಕಾದಷ್ಟಿವೆ. ಕಾಯಿದೆಯ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕೆ

ತಾವು ಇಟ್ಟುಕೊಂಡಿರುವ ವಸ್ತುಗಳನ್ನು ವಾಪಸ್ಸು ಕೊಡದವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದುದರಿಂದ ಇದು ಎಲ್ಲರೂ ಮಾಡಬೇಕಾದ ಕೆಲಸ ಕರ್ನಾಟಕ ರಾಜ್ಯದಲ್ಲಿ ಋಣ ಪರಿಹಾರ ಕಾಯಿದೆಯನ್ನು ಒಳ್ಳೆಯ ದೃಷ್ಟಿಯಿಂದ ತರಲಾಗಿದೆ. ಈಗಾಗಲೇ ಸುಮಾರು ಒಂಭತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ಜನರಿಗೆ ವಾಪಸ್ಸು ಕೊಡಿಸಲಾಗಿದೆ ನಮ್ಮ ಜಿಲ್ಲೆಯೊಂದರಲ್ಲೇ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಹಣವನ್ನು ವಾಪಸ್ಸು ಕೊಡಲಾಗಿದೆ.

(vi) *re: Strike of Veterinary Livestok Inspectors.*

SRI KONANDUR LINGAPPA (Thirthalli).—I call the attention of the Minister of State for Animal Husbandry to the strike of Veterinary Livestock Inspectors and to their demands.

SRI B. G. BANAKAR.—I wish to make the following statement. The Karnataka State Veterinary and Livestock Inspectors' Association have started a relay hunger strike with batches of 10 volunteers each day from 15-7-1977. Their demands are as under :—

1. Raising promotional opportunities to the Veterinary & Livestock Inspectors ;
2. Sanction of Special Pay ;
3. Providing Rural allowance in lieu of House ;
4. Increase in Fixed Travelling Allowance.

Such demonstrations by Government servants are not in accordance with conduct rules.

The demands mentioned against items '2' 3 and 4 above are those that have already been considered by the Narayana Pai Pay Commission. Government have issued orders on some of the recommendations and others are under consideration. As regards their first demand, the Veterinary and Livestock Inspectors Grade II have now opportunities for promotion to Veterinary Livestock Inspector Grade I and Supervisor. At present Government do not recruit Veterinary Livestock Inspectors Grade II. The initial recruitment to the Department is at the level of Compounder. S. S. L. C. qualified candidates are recruited and trained at Government expense for 6 months for becoming Compounder. Compounders are eligible for promotion on 100% basis to the level of Veterinary Livestock Inspectors Grade II. Thus, the new entrants to the department have chances of 3 further promotions during their career.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ನಡೆಸುತ್ತಿರುವ ಸತ್ಯಾಗ್ರಹವನ್ನು ಮಾನ್ಯ ಸಚಿವರು "not in accordance with conduct rules" ಎಂದು ಹೇಳಿದ್ದಾರೆ. ಆದರೆ, ಅವರು ಬಹುಕಾಲದಿಂದ ಸರ್ಕಾರಕ್ಕೆ ಪ್ರಾರ್ಥನೆ, ಕೀರ್ತನೆ ಎಲ್ಲಾ ಮಾಡಿ ಮುಗಿಸಿ, ಆದೆಲ್ಲಾ ಆದಮೇಲೆ ಕಡೆಯದಾಗಿ ಅನಿವಾರ್ಯವಾದ ಈ ಸತ್ಯಾಗ್ರಹಕ್ಕೆ ಬಂದಿದ್ದಾರೆ. ಈ ಅನಿವಾರ್ಯ ಕಾರಣಕ್ಕೆ ತೊಡಗಲು ಅವಕಾಶ ಕೊಟ್ಟಿದ್ದು ಸರ್ಕಾರವೇ ಹೊರತು ಅವರಲ್ಲ. ಒಬ್ಬ ಕಾಂಪೌಂಡರ್ ಆಗಿ ಕೆಲಸಕ್ಕೆ ಸೇರಿದರೆ ಕೊನೆಗೆ ಅವನು ವೆಟರ್ನರಿ ಇನ್‌ಸ್ಪೆಕ್ಟರ್ ಆಗಿ ನಿವೃತ್ತ